# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಂಖ್ಯೆ.49, ಲಿಂಗರಾಜಪುರ (ಹೊಸ ವಾರ್ಡ್ ಸಂಖ್ಯೆ.102) ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಲಿಂಗರಾಜಪುರ ವಾರ್ಡ್ ಕಛೇರಿಯ ಕಟ್ಟಡದಲ್ಲಿ ದಿನಾಂಕ: 21-01-2023 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು,**

1) ಶ್ರೀ ಅಜ್ಮಲ್ ಆರೀಫ್, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2) ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3) ಶ್ರೀ ವೆಂಕಟೇಶ್, ವೈದ್ಯಾಧಿಕಾರಿಗಳು, ಲಿಂಗರಾಜಪುರ,
4) ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ,
5) ಶ್ರೀ ಉಮೇಶ್.ಆರ್, ಸ್ಥಳೀಯರು, ಲಿಂಗರಾಜಪುರ,
6) ಶ್ರೀಮತಿ / ಮಿಸೆಸ್ ಪಿಂಟೋ, ಸ್ಥಳೀಯರು, ಲಿಂಗರಾಜಪುರ,
7) ಶ್ರೀಮತಿ ಸುಮಿತ್ರ, ಜನಾಗ್ರಹ ಸದಸ್ಯರು,
8) ಶ್ರೀ ಪಿ.ಜಯಶೀಲನ್, ಅಧ್ಯಕ್ಷರು, ಕೆ.ಎಸ್.ಎಫ್.ಸಿ ಲೇಔಟ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್,

**ಹಾಜರಿದ್ದ ಅಧಿಕಾರಿಗಳು**

1) ಶ್ರೀ ಅಮಿತ್, ಸಹಾಯಕ ಅಭಿಯಂತರರು, ಬೀದಿ ದೀಪಗಳ ವಿಭಾಗ.
2) ಕು॥ ಪೂಜಾ.ಎಂ, ಸಹಾಯಕ ಅಭಿಯಂತರರು, ಲಿಂಗರಾಜಪುರ
3) ಶ್ರೀ ವಿಜಯ್, ಕಿರಿಯ ಆರೋಗ್ಯ ನಿರೀಕ್ಷಕರು,
4) ಕು॥ ರಜನಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಸಹಾಯಕ ಅಭಿಯಂತರರು,
5) ಶ್ರೀ ಕೃಷ್ಣಮೂರ್ತಿ, ಕಂದಾಯ ನಿರೀಕ್ಷಕರು,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ಘನತ್ಯಾಜ್ಯ ನಿರ್ವಹಣೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

2) **ಬೀದಿ ದೀಪಗಳ ನಿರ್ವಹಣೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

3) **ಬೃಹತ್ ನೀರುಗಾಲುವೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

4) <u>ಆರೋಗ್ಯ ಇಲಾಖೆ:-</u>

- <u>ಶ್ರೀ ವೆಂಕಟೇಶ್, ಆರೋಗ್ಯಾಧಿಕಾರಿಗಳು ಮಾತನಾಡಿ</u> ಪ್ರಸ್ತುತ ಲಿಂಗರಾಜಪುರ ವಾರ್ಡ್ ಆರೋಗ್ಯ ಕೇಂದ್ರದಲ್ಲಿ 2ನೇ ಡೋಸ್ ವ್ಯಾಕ್ಸಿನೇಷನ್ ಹಾಗೂ ಬೂಸ್ಟರ್ ಡೋಸ್‌ಗಳನ್ನು ನೀಡಲಾಗುತ್ತಿದ್ದು, ಪ್ರಸ್ತುತ ಯಾವುದೇ ಕೋವಿಡ್ ಪ್ರಕರಣಗಳು ದೃಢಪಟ್ಟಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

5) <u>ಕಾಮಗಾರಿ ಇಲಾಖೆ:-</u>

- <u>ಶ್ರೀಮತಿ ಸುಮಿತ್ರ, ಜನಾಗ್ರಹ ಸದಸ್ಯರು ಮಾತನಾಡಿ</u> ನಕ್ಷತ್ರ ಅಪಾರ್ಟ್‌ಮೆಂಟ್ ಹಾಗೂ ಅಕ್ಕಪಕ್ಕದ ಚರಂಡಿಗಳ ಹೂಳನ್ನು ತೆಗೆಯಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಅಭಿಯಂತರರು ಸದರಿ ಪ್ರದೇಶದ ರಸ್ತೆಗಳ ಚರಂಡಿಗಳ ಹೂಳು ತೆಗೆಯುವ ಕಾಮಗಾರಿಯನ್ನು ಅಮೃತ್ ನಗರೋತ್ಥಾನ ಅನುದಾನದ ಅಡಿಯಲ್ಲಿ ಕೈಗೊಳ್ಳಲಾಗುವುದಾಗಿ ಸಭೆಗೆ ತಿಳಿಸಲಾಯಿತು.

6) <u>ಕಂದಾಯ ಇಲಾಖೆ:-</u>

- <u>ಶ್ರೀ ಕಿರೀಟಪ್ಪ, ಅಧ್ಯಕ್ಷರು, ಲಿಂಗರಾಜಪುರ ಕ್ಷೇಮಾಭಿವೃದ್ಧಿ ಸಂಘ, ಮಾತನಾಡಿ</u> ಮುನಿತಾಯಪ್ಪ ಬಡಾವಣೆಯಲ್ಲಿ ಬಿಬಿಎಂಪಿ ವತಿಯಿಂದ ರಸ್ತೆ ಸೂಚನಾ ಫಲಕಗಳನ್ನು ಅಳವಡಿಸಲಾಗಿದ್ದು, ಅದರಲ್ಲಿ ಕೆಲವು ರಸ್ತೆಗಳ ಸೂಚನಾ ನಾಮ ಫಲಕಗಳ ಹೆಸರು ಪುನರಾವರ್ತಿತಗೊಂಡಿರುವುದಾಗಿ ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಅಭಿಯಂತರರು, ಈ ಬಗ್ಗೆ ಕಂದಾಯ ವಿಭಾಗದವರೊಂದಿಗೆ ಜಂಟಿಯಾಗಿ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

7) <u>ಉದ್ಯಾನವನಗಳ ವಿಭಾಗ:-</u> ಯಾವುದೇ ಸಮಸ್ಯೆ ಇರುವುದಿಲ್ಲ.

8) <u>ಅರಣ್ಯ ವಿಭಾಗ:-</u>

- <u>ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ ಲೇಔಟ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರು ಮಾತನಾಡಿ</u> ವಾರ್ಡ್ ಪ್ರದೇಶದಲ್ಲಿ ಅನೇಕ ಕಡೆಗಳಲ್ಲಿ ಮರದ ಕೊಂಬೆಗಳು ರಸ್ತೆಗೆ ಚಾಚಿಕೊಂಡಿದ್ದು, ಅವುಗಳನ್ನು ಆಗಿಂದ್ದಾಗ್ಗೆ ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದು, ಈವರೆವಿಗೂ ಯಾವುದೇ ಕ್ರಮ ಕೈಗೊಳ್ಳದೆ ಇರುವ ಬಗ್ಗೆ ಆಕ್ಷೇಪನೆಯನ್ನು ವ್ಯಕ್ತಪಡಿಸುತ್ತಾ, ಈ ಬಗ್ಗೆ ಕೂಡಲೇ ಅಗತ್ಯ ಕ್ರಮ ವಹಿಸಲು ಹಾಗೂ ಮುಂದಿನ ಸಭೆಗಳಿಗೆ ಕಡ್ಡಾಯವಾಗಿ ಹಾಜರಿರಲು ಕ್ರಮ ವಹಿಸಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

9) <u>ಪಶು ಸಂಗೋಪನೆ ವಿಭಾಗ:-</u> ಯಾವುದೇ ಸಮಸ್ಯೆ ಇರುವುದಿಲ್ಲ.

10) <u>ನೀರು ಸರಬರಾಜು:-</u> ಯಾವುದೇ ಸಮಸ್ಯೆ ಇರುವುದಿಲ್ಲ.

11) <u>ಪೊಲೀಸ್ (ಕಾನೂನು ಸುವ್ಯವಸ್ಥೆ):-</u>

* ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ ಲೇಔಟ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರು ಮಾತನಾಡಿ ಆಯಿಲ್ ಮಿಲ್ ರಸ್ತೆ ಹಾಗೂ ಕೆ.ಎಸ್.ಎಫ್.ಸಿ ಬಡಾವಣೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸರಗಳ್ಳತನ ಹಾಗೂ ಕಳ್ಳತನ ಪ್ರಕರಣಗಳು, ಪುಂಡ ಪೋಕಿರಿಗಳು ರಾತ್ರಿ ಸಮಯದಲ್ಲಿ ಮರದ ಕೆಳಗಡೆ ಕುಳಿತು ಗಾಂಜಾ, ಅಫೀಮು ಸೇವಿಸುವುದು ಮತ್ತು ಇನ್ನಿತರೆ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದಾಗಿ ಸಭಾ ಗಮನಕ್ಕೆ ತಂದಾಗ ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ಸಬ್ ಇನ್ಸ್‌ಪೆಕ್ಟರ್ ಶ್ರೀ ರಾಮಚಂದ್ರಪ್ಪ ರವರು ಮಾತನಾಡಿ ಈಗಾಗಲೇ ಸದರಿ ಪ್ರದೇಶಕ್ಕೆ ಹೊಯ್ಸಳ ಗಸ್ತನ್ನು ನಿಯೋಜಿಸಲಾಗಿದ್ದು, ಇನ್ನಷ್ಟು ತೀವ್ರಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

12) **ಬೆಸ್ಕಾಂ ಇಲಾಖೆ** :- ಯಾವುದೇ ಸಮಸ್ಯೆ ಇರುವುದಿಲ್ಲ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳನ್ನು ಕೂಡಲೇ ಅನುಷ್ಠಾನಕ್ಕೆ ತರಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.49/102, ಲಿಂಗರಾಜಪುರ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.49/102, ಲಿಂಗರಾಜಪುರ

**ಪ್ರತಿಯನ್ನು**

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.